(ii) Extension of benefit of Grant Period for Mirority Institutions

SRI A. M. HINDSGERI.--The Government in their o der No. ED 148 SOH 85 (2), dated 4-6-1986, has brought down the grantless period from 7 years to 3 years for granting grants under the Grant-in Aid Code in respect of educational institutions run by the Backward Communities. While issuing this order Government has not considered the educational institutions run by the minorities. This has caused resentment among the minorities and grave injustice is done to the educational institutions run by minorities, while excluding them from the purview of this Government order. Would the Government inform this Hon'ble House whether this benefit and concession would also be extended to minorities run educational Institutions ?

ಶ್ರೀ ಆರ್. ಎಲ್. ಜಾಲಪ್ಪ.—ಇದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ಅವರಿಗೆ ಉತ್ತರ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

(iii) Madikeri of Kokada Chinnappa of Kadagudal Village.

SRI D. A. CHINNAPPA (Madikeri).—In June 1986, there was a murder of one Kokada Cariappa at Kadagudal village, which resulted in communal clash and the houses of Muslims were burnt down, moveable and immoveable properties were damaged and some of the Muslim families are driven out. The Thasildar was asked to assess the damages caused by the residents of Kadagudal village. I would like to know from the Government whether the Government has given any relief to them and the total amount of relief sanctioned and whether this has been paid them. If not given, I urge the Government to make arrangements immediately for giving relief to the sufferers.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ತಪ್ಪಿ ಆಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ. ಕೊಡಗು ಜಿಲ್ಲಾ ಮಡಿಕೇರಿ ಗ್ರಾಮಾಂತರ ಆರಕ್ಷಕ ಠಾಣೆಯ ವ್ಯಾಪ್ತಿಗೆ ಸೇರಿದ ಕಡಗದಾಳು ಗ್ರಾಮದ ಸಮೀಪ ಇರುವ ತುರುಕರಟ್ಟಿಯಲ್ಲಿ ವಾಸ ಮಾಡತಕ್ಕ ಮುಸ್ಲಿಂ ಜನಾಂಗದ ಖಾಸಿಂರವರು ಒಂದು ಚಿಕ್ಕದಾದ ಅಂಗಡಿ ಇಟ್ಟುಕೊಂಡಿದ್ದು ದಿನಾಂಕ ೧೫-೬-೧೯೮೬ರಂದು ಸಂಜೆಯ ೮ ಘಂಟೆ ಸಮಯದಲ್ಲಿ ಕಡಗದಾಳು ವಾಸಿ ಕೋಕೆದ ಕಾರಿಯಪ್ಪ ಅಲಿಯಾಸ್ ಕೇಸು ಮತ್ತು ರಾಜು ಇವರುಗಳು ಪಾನಮತ್ತರಾಗಿ ಖಾಸಿಂರವರ ಅಂಗಡಿಗೆ ಹೋಗಿ ಕ್ಷುಲ್ಲಕ ಕಾರಣದಿಂದಾಗಿ ಇವರುಗಳ ನಡುವೆ ಮಾತಿನ ವಾಗ್ವಾದ ಉಂಟಾಗಿ ಕೊನೆಗೆ ಹೊಡೆದಾಟ ಪ್ರಾರಂಭವಾಯಿತು. ಅದೇ ಸಮಯದಲ್ಲಿ ಖಾಸಿಂರವರ ಮಗ ಅಲಿ ಅಬುಬೇಕರ್, ಕೆ.ಕೆ. ಮಹಮ್ಮದ್ ಅಲಿ ಮತ್ತು ಪಿ. ಮಹಮ್ಮದ್ ಇವರುಗಳು ಸೇರಿ ಕತ್ತಿ ಮಂತ್ರ ದೊಣ್ಣೆಗಳಿಂದ ಹೊಡೆದದರ ಪರಿಣಾಮವಾಗಿ ಕಾರಿಯಪ್ಪನು ಮೃತ ಪಟ್ಟನು. ಕಾರಿಯಪ್ಪನ ಜೊತೆಯಲ್ಲಿ ರಾಜು ತಪ್ಪಿಸಿಕೊಂಡು ಹೋದನು. ಈ ಕೃತ್ಯವು ನಡೆದ ತರುವಾಯ ರಾತ್ರಿ ಸುಮಾರು ೧೧ ಘಂಟೆಗೆ ಅಬುಬೇಕರ್ ಎಂಬುವನು ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ತನಗೆ ಕಡಗದಾಳು ಕಾರಿಯಪ್ಪ ಮರ್ಡರ್ ಕೇಸು ಮತ್ತು ರಾಜು ರಾತ್ರಿ ೮ ಘಂಟೆ ಸಮಯದಲ್ಲಿ ಖಾಸಿಂರವರ ಅಂಗಡಿಯ ಬಳಿ ಕುಡಿದು ನಿಶಾಮಶ್ಕರಾಗಿ ವಿನಾಕಾರಣ ಜಗಳ ತೆಗೆದು ದೊಣ್ಣೆಯಿಂದ ಖಾಸಿಂರವರನ್ನು ಹೊಡೆಯಲು ಬಂದಾಗ್ಗೆ, ಬಿಡಿಸಲು ಹೋದ ತನಗೂ ಏಟು ಬಿದ್ದು ಗಾಯವಾಗಿರುವುದಾಗಿ ನೀಡಿದ

ದೂರಿನ ಪ್ರಕಾರ ಆರಕ್ಷಕರು ಮೊಕದ್ದಮೆ ನಂ ೧೨೧೮೬೬ರ ಭಾರತೀಯ ದಂಡ ಸಂಹಿತೆ ಕಲಂ ೪೪೪, ೩೨೪ ಹಾಗೂ ೩೪ರ ಪ್ರಕಾರ ದಾಖಲು ಮಾಡಿಕೊಂಡಿರುತ್ತಾರೆ.

ದಿನಾಂಕ ೧೬-೬-೧೯೮೬ರಂದು ಸ್ಥಳೀಯ ಜನಗಳು ಕೆಲಸಕ್ಕೆ ಹೋಗುವ ಕಾಲಕ್ಕೆ ಕಾರಿಯಪ್ಪ ನವರ ಶವವನ್ನು ನೋಡಿ ಪುಷ್ಪಾಕರ್ ಹೇಳಿಕೆಯ ಪ್ರಕಾರ ೧೨೨/೮೬ ಭಾರತೀಯ ದಂಡ ಸಂಹಿತೆ ಕಲಂ ೩೦೨, ೩೨೬ ಹಾಗೂ ೩೪ರ ಪ್ರಕಾರ ಮೊಕದ್ದಮೆಯನ್ನು ದಾಖಲು ಮಾಡಿಕೊಂಡಿರುತ್ತಾರೆ. ಈ ಸಂದರ್ಭದಲ್ಲಿ ಗಾಯಗೊಂಡ ರಾಜುವನ್ನು ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಯಿತು.

ಅಲ್ಲದೆ ಸುಮಾರು ೧೫ ಮುಸಲ್ಮಾನ ಕುಟುಂಬಗಳು ತಮ್ಮ ಮನೆಗಳನ್ನು ಬಿಟ್ಟು ಹೊರಟು ಹೋಗಿರುವುದಾಗಿ ತಿಳಿದು ಬಂದಿದೆ. ಮುಸಲ್ಮಾನರಿಂದ ಘಟನೆ ನಡೆದ ವಿಷಯ ತಿಳಿದು ಅಲ್ಲಿಯ ರಾಜಕೀಯ ಪಂಥಿಂಡರು ಸ್ಥಳಕ್ಕೆ ಬಂದು ಸ್ಥಳೀಯ ಹಿಂದೂ ಯುವಕರನ್ನು ಪ್ರಚೋದಿಸ ತೊಡಗಿದರು. ಅಲ್ಲದೆ ಅದೇ ದಿವಸ ಮಧ್ಯಾಹ್ನ ೩ ಗಂಟೆ ಸಮಯಕ್ಕೆ ಖಾಸಿಂ ಮನೆಯ ಪಕ್ಕದಲ್ಲಿದ್ದ ಅಬ್ದುಲ್ಲಾರವರ ಮನೆಗೆ ಯಾರೋ ಕಿಡಿಗೇಡಿಗಳು ಸ್ಫೋಟಕ ವಸ್ತುಗಳನ್ನು ಸಿಡಿಸಿದ ಕಾರಣ ಮನೆ ಯಲ್ಲಿಟ್ಟಿದ್ದ ಬಟ್ಟೆ ಬರೆಗಳಿಗೆ ಬೆಂಕಿ ತಗಂಲಿ ಮನೆಯಲ್ಲಿದ್ದ ದಿನಬಳಕೆ ವಸ್ತುಗಳು ಉರಿಯತೊಡಗಲು. ಅಷ್ಟರಲ್ಲಿ ಕರ್ತವ್ಯನಿರತ ಆರಕ್ಷಕರು ಮನೆಯ ಬಾಗಿಲನ್ನು ತೆರೆದು ಬೆಂಕಿಯನ್ನು ಆರಿಸಿರುತ್ತಾರೆ. ಈ ಘಟನೆಗೆ ಸಂಬಂಧಪಟ್ಟ ಹಾಗೆ ಸುಮಾರು ರೂ. ೫,೦೦೦ ನಷ್ಟ ಉಂಟಾಗಿರುವುದಾಗಿ ತಿಳಿದು ಬಂದಿದೆ. ಈ ಘಟನೆಗೆ ಸಂಬಂಧಪಟ್ಟ ಹಾಗೆ ಗ್ರಾಮಾಂತರ ಆರಕ್ಷಕ ಠಾಣಾ ಕ್ರಮಾಂಕ ೧೨೬/೮೬ ಭಾರತ ದಂಡ ಸಂಹಿತೆ ಕಲಂ ೪೫೭ರ ರೀತ್ಯ ಮೊಕದ್ದಮೆ ದಾಖಲು ಮಾಡಿಕೊಂಡಿರುತ್ತಾರೆ. ಇದೇ ಸಮಯದಲ್ಲಿ ಕೆಲವು ತಿಳಿಗೇಡಿಗಳು ಪಕ್ಕದಲ್ಲಿದ್ದ ಹುಲ್ಲಿನ ಚಾವಣಿ ಮತ್ತು ಮನೆಗಳಿಗೆ ಬೆಂಕಿ ಇಡಲು ಪ್ರಯತ್ನ ಪಟ್ಟಾಗ್ಗೆ ಆರಕ್ಷಕರು ಪ್ರವೇಶಮಾಡಿ ಬೆಂಕಿಯನ್ನು ಹತೋಟಿಗೆ ತಂದಿರುತ್ತಾರೆ. ಹೆಚ್ಚಿನ ನಷ್ಟ ಸಂಭವಿಸಿರುವುದಿಲ್ಲ.

ದಿನಾಂಕ ೧೬-೬-೧೯೮೬ರಂದು ಕೆಲವು ತಿಳಿಗೇಡಿಗಳು ನೀರುಕೊಲ್ಲಿ ಎಂಬಲ್ಲಿ ವಾಸವಾಗಿರುವ ಖಾಸಿಂನ ಮಗ ಹವಿಾದ್‌ರವರು ಮನೆಯಲ್ಲಿಲ್ಲದ ಸಮಯದಲ್ಲಿ ಮನೆಗೆ ಬೆಂಕಿ ಹಚ್ಚಿ ದ್ದು, ಮನೆಯ ಸಾಮಾನುಗಳೆಲ್ಲಾ ಸುಟ್ಟು ಹೋಗಿದ್ದು ಸುಮಾರು ರೂ. ೫,೦೦೦ ನಷ್ಟ ಉಂಟಾಗಿರುವುದಾಗಿ ತಿಳಿದು ಬಂದಿದೆ. ಅಲ್ಲಗೆ ಮಡಿಕೇರಿ ಸಿದ್ದಾಪುರ ರಸ್ತೆಯಲ್ಲಿ ಕತ್ತಲೆ ಕಾಡಿಗೆ ಹೋಗತಕ್ಕ ರಸ್ತೆಯ ಪಕ್ಕದಲ್ಲಿರುವ ಅಬ್ದುಲ್ಲಾರವರಿಗೆ ಸೇರಿದ ದಿನಸಿ ಅಂಗಡಿಯ ಬಾಗಿಲನ್ನು ತೆಗೆದು ಸಾಮಾನುಗಳನ್ನೆಲ್ಲಾ ಚೆಲ್ಲಾಪಿಲ್ಲಿ ಮಾಡಿ ಲೂಟಿ ಮಾಡಿರುವುದಾಗಿ ಇದರಿಂದ ಸುಮಾರು ರೂ.೫,೦೦೦ ನಷ್ಟ ಉಂಟಾಗಿರುವುದಾಗಿ ತಿಳಿದು ಬಂದಿದೆ.

ದಿನಾಂಕ ೧೬-೬-೧೯೮೬ರಂದು ಕಡಗದಾಳು ಗ್ರಾಮದ ಕೆಲವು ಯುವಕರು ತಿತ್ತಿಮತ್ತಿಯಿಂದ ಸಿದ್ದಾಪುರಕ್ಕೆ ಹೋಗಲು ಬರುತ್ತಿದ್ದ ಖಾಸಗಿ ವಾಹನವನ್ನು ಕಡಗದಾಳು ಶಾಲೆಯ ಬಳಿ ನಿಲ್ಲಿಸಿ ಅದೇ ವಾಹನದಲ್ಲಿ ಪ್ರಯಾಣ ಮಾಡುತ್ತಿದ್ದ ಆದಂ ಎಂಬುವವನನ್ನು ಅಪರಾಧಿ ಖಾಸಿಂನ ಬೆಂಬಲಿಗನೆಂದು ತಿಳಿದು ವಾಹನದಿಂದ ಕೆಳಕ್ಕೆ ಇಳಿಸಿ ಕೈಯಿಂದ ಮತ್ತು ಕಾಲಿನಿಂದ ಒದ್ದು ಗಾಯಗೊಳಿಸಿರುತ್ತಾರೆ.ವಿಷಯ ತಿಳಿದ ಆರಕ್ಷಕರು ತಮ್ಮ ವಾಹನದಲ್ಲಿ ಕರೆತಂದು ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲು ಮಾಡಿರುತ್ತಾರೆ. ಅಲ್ಲದೆ ಈ ಘಟನೆಯ ಸಂಬಂಧವಾಗಿ ಗ್ರಾಮಾಂತರ ಆರಕ್ಷಕ ಠಾಣಾ ಕ್ರಮಾಂಕ ೧೨೪/೮೬ರ ಭಾರತ ದಂಡ ಸಂಹಿತೆ ಕಲಂ ೧೪೩, ೩೪೨, ೩೨೪ರ ರೀತ್ಯ ಕೊರವಂಡ, ದಾದಾ ಮತ್ತು ಇತರ ೯ ಜನರ ವಿರುದ್ಧ ಮೊಕದ್ದಮೆಯನ್ನು ದಾಖಲು ಮಾಡಿಕೊಂಡಿರುತ್ತಾರೆ.

ಈ ಘಟನೆಯ ಸಂಬಂಧ ಯಾವ ಮುಸ್ಲಿಮರ ಕುಟುಂಬಗಳನ್ನು ಹೊಡೆದೋಡಿಸಿಲ್ಲ ಮತ್ತು ಈ ಸಂಬಂಧ ನೊಂದವರಿಗೆ ಮತ್ತು ಮೃತ ಪಟ್ಟ ಕುಟುಂಬಕ್ಕೆ ಪರಿಹಾರ ಕೊಡಲು ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ಕೊಡಗಿನ ಜಿಲ್ಲಾಧಿಕಾರಿಗಳನ್ನು ಕೇಳಲಾಗಿದೆ.